ಅಭಿವ್ಯಕ್ತಿಗಳಲ್ಲಿ ಗ್ರಹಿಸಿರುವ ರೀತಿಯು, ನೋಡುಗರಿಗೆ ಗಾಂಧಿಯ ತಾತ್ವಿಕ ನೋಟಗಳ ಮರು ಮನನಕ್ಕೆ ತೊಡಗಿಸಬಲ್ಲದು. ಜತೀಶ್ ಕಲ್ಲಟ್ ಅವರ 'ಕವರಿಂಗ್ ಲೆಟರ್', ಹಿಟ್ಲರ್‌ಗೆ ಗಾಂಧಿ ಬರೆದ ಪತ್ರವನ್ನು ಬಳಸಿ ಅಭಿವ್ಯಕ್ತಿಸಿರುವ (2012) ಕ್ರಮವು ಶಾಂತಿ ಮತ್ತು ಕ್ರೌರ್ಯಗಳ ಕುರಿತ ಹೊಸ ನೋಟಗಳನ್ನು ನೀಡಬಲ್ಲದು. ಅರ್ಪಣ ಕೌರ್ ಅವರ ತೈಲವರ್ಣಗಳ 'ಚರಕ' ಚಿತ್ರಕಲಾ ಕೃತಿಯನ್ನು (2018) ನೋಡಿದಾಗ, ಗಾಂಧಿಯವರ ನೂಲುವ ಚರಕವು ಭಾರತೀಯ ದೃಶ್ಯ ಕಲಾವಿದರಿಗೆ ಸ್ಫೂರ್ತಿಯ ಚಿಲುಮೆಯಂತೆ ಕಾಣಿಸಿಕೊಂಡಿದೆ ಎನ್ನಿಸದಿರದು! ಅಂಕೊನ್ ಮಿತ್ರ ಅವರ 'ಅನಂತ ಚಕ್ರಗಳು' ಇನ್‌ಸ್ಟಾಲೇಶನ್ ಅಭಿವ್ಯಕ್ತಿಯಲ್ಲಿ ಚರಕದ ಚಕ್ರಗಳ ಅವರದೇ ಆದ, ಹಾಸುಹೊಕ್ಕ ಹೊಲಿಗೆಯ ಚಕ್ರಗಳ ರೂಪಗಳಲ್ಲಿ, ಗುಡಿಕೈಗಾರಿಕೆಗಳ ಪ್ರೀತಿಯ ಆಶಯವನ್ನು ಅನುಭವಿಸಬಹುದಾಗಿದೆ. ಗಾಂಧಿಯವರು ದೀರ್ಘ ಉಪವಾಸ ಮಾಡಿದ 21 ದಿನಗಳನ್ನು ಇಲ್ಲಿ, ಸಾಂಕೇತಿಕವಾಗಿ 210 ಮಡಿಕೆಗಳ ದೊಡ್ಡ ಉಬ್ಬುರುಳೆಯಾಕಾರದ ರೂಪವಾಗಿ ಮೂಡಿಸಿದ್ದಾರೆ. ಇಡಿಯಾಗಿ ನೋಡಿದರೆ ಈ ಅಭಿವ್ಯಕ್ತಿಯು ಗಾಂಧೀ ಚಳವಳಿಯ ಕಾಲದ, ಅವರ 17 ಉಪವಾಸಗಳ ಸಂಖ್ಯೆ ಮತ್ತು ಚರಕಗಳನ್ನು ದುಡಿಸಿಕೊಂಡಿದೆ. ಕೌತುಕಮಯ 'ಒಂದು ರಾಷ್ಟ್ರದ ಹುಟ್ಟು–1' ವುಡ್ ಕಟ್ ಪ್ರಿಂಟ್ (2017) ಒಂದರಲ್ಲಿ ಜಗದೀಶ್ ತಮ್ಮಿನೇನಿ, ಗಾಂಧಿಯವರ ಸತ್ಯಾಗ್ರಹ ಕಲ್ಪನೆ, ಸ್ವಾತಂತ್ರ್ಯ ಸೃಷ್ಟಿಯ ಸಾಹಸದ ಹೊಳಹುಗಳನ್ನು ಉತ್ಕಟವಾಗಿ ಬಿಂಬಿಸಿದ್ದಾರೆ.

ಸ್ವಾತಂತ್ರ್ಯಪೂರ್ವದ ಎಂ.ಎಫ್. ಹುಸೇನ್ ಅವರ ಬಾಲ್ಯ ಮತ್ತು ಗಾಂಧಿ ನೆನಪುಗಳು ಹಲವಾರು ಕೃತಿಗಳಲ್ಲಿ ಚಿತ್ರಣಗೊಂಡಿವೆ. ಮದರಸಾವೊಂದರಲ್ಲಿ ಗಾಂಧಿಯನ್ನು ಕಪ್ಪುಹಲಗೆಯ ಮೇಲೆ ಬಾಲ್ಯದಲ್ಲಿ ಚಿತ್ರಿಸಿದ ನೆನಪಿನ ಪುನರ್ ಸೃಷ್ಟಿಶೀಲತೆಯ, ಒಂದೆರಡು ವರ್ಣಚಿತ್ರಗಳು ಅನನ್ಯವಾಗಿವೆ. ಮೈಸೂರಿನಲ್ಲಿ ಹುಟ್ಟಿ ಮದರಾಸಿನಲ್ಲಿ ಬದುಕಿದ ಶ್ರೀಮತಿ ಎಂಬ ಕಲಾವಿದೆ, ಗಾಂಧಿಯವರನ್ನು ಹತ್ತಿರದಿಂದ ನೋಡಿಕೊಳ್ಳುತ್ತಿದ್ದವರು. ಪ್ರಾರ್ಥನಾ ಸಭೆಗಳಲ್ಲಿ ಶ್ರೀಮತಿಯವರೂ ಹಾಡುತ್ತಿದ್ದರು. ಅವರ ಬಹುತೇಕ ಚಿತ್ರಕೃತಿಗಳು ಬಂಗಾಳದ ಪುನರುಜ್ಜೀವನ ಪ್ರಭಾವಕ್ಕೆ ಒಳಗಾದಂತಹವು; ಅಜಂತಾ ಚಿತ್ರಕಲೆಯ ಸ್ಫೂರ್ತಿಯೂ ಇದ್ದೇ ಇದ್ದಿತು. 2013ರಲ್ಲಿ ರಜಾರವರು 'ಸತ್ಯದೊಂದಿಗೆ ನನ್ನ ಪ್ರಯೋಗಗಳು' ಎಂಬ ಶೀರ್ಷಿಕೆಯ ಗಾಂಧಿ ತಾತ್ವಿಕತೆಯನ್ನು 7 ವರ್ಣಚಿತ್ರಗಳಲ್ಲಿ ಚಿತ್ರಿಸಿದ್ದಾರೆ. ಒಂದು ಕೃತಿಯಲ್ಲಿ 'ಸಬ್ ಕೋ ಸನ್ಮತಿ ದೇ ಭಗವಾನ್' ಬರಹವನ್ನು ಅಡಕಗೊಳಿಸಿದ್ದಾರೆ. ದೃಶ್ಯ ಮತ್ತು ಅಕ್ಷರಗಳು ಪರಸ್ಪರವಾದ ಕೃತಿ ಇದು. ಕೆ.ಎಂ. ಆದಿಮೂಲಂ 1962–1996ರ ಅವಧಿಯಲ್ಲಿ ಚಿತ್ರಿಸಿದ ರೇಖಾಚಿತ್ರಗಳಲ್ಲಿ ಗಾಂಧಿಯವರ ಮುಗ್ಧತೆ–ಗಾಂಭೀರ್ಯಗಳು ವಿಶಿಷ್ಟ ಸೌಂದರ್ಯದಿಂದ ಕಾಣಿಸಿಕೊಂಡಿವೆ.

## 6

ಮೂರು ಆಯಾಮಗಳ (3ಡಿ) ಸೃಷ್ಟಿಕಾರ ಶಿಲ್ಪಿಗಳಿಗಂತೂ ಗಾಂಧಿಯವರ ರೂಪವು ಈ ಮೊದಲೇ ಉಲ್ಲೇಖಿಸಿರುವಂತೆ ಅಭಿವ್ಯಕ್ತಿಯ ಬೀಜರೂಪದ, ಸ್ಫೂರ್ತಿಯ ಕೇಂದ್ರ ಬಿಂದು. ದೆಹಲಿಯ ರಾಮ್ ಸುತಾರ್ ಅವರಿಂದ ಆರಂಭಿಸಿ, ಕನ್ನಡದ ವೆಂಕಟಾಚಲಪತಿ ಅವರವರೆಗೆ ನೂರಾರು ಶಿಲ್ಪಿಗಳು ಗಾಂಧಿಯನ್ನು ಗ್ರಹಿಸಿದ್ದಾರೆ. ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ವಿಶ್ವಾತ್ಮಕ ವ್ಯಕ್ತಿತ್ವದ ಗಾಂಧಿಯವರ ಶಿಲ್ಪಗಳಿರುವುದು ಸಹಜವೇ ಆಗಿದೆ. ಬ್ರಿಸ್ಬೇನ್, ಸ್ಪೇನ್, ಜೋಹಾನ್ಸ್‌ಬರ್ಗ್ (ಗಾಂಧೀಜಿ ಯುವಕನಾಗಿದ್ದಾಗಿನ ಅಪರೂಪದ ಶಿಲ್ಪ), ಲಂಡನ್ನಿನ ಪಾರ್ಲಿಮೆಂಟ್ ಚೌಕ ಮತ್ತು ನ್ಯೂಯಾರ್ಕ್ ನಗರಗಳನ್ನು ಇಲ್ಲಿ ಹೆಸರಿಸಬಹುದು. ಹಾಗೆಯೇ ನೆದರ್ಲೆಂಡ್‌ನ ಮೇಡಂ ಟುಸ್ಸಾಡ್ಸ್ ಮ್ಯೂಸಿಯಂನಲ್ಲಿ ಮೇಣದ ಶಿಲ್ಪವೂ ಇದೆ ಎಂಬುದು ಅಚ್ಚರಿಯೇನಲ್ಲ.

ಗಾಂಧಿಯವರ ರೂಪದ ಸೃಷ್ಟಿಯ ಕಥನದ ವಿವರಗಳು ಮುಂದೆಯೂ ನಿರಂತರ ಸಾಲುಗಳಲ್ಲಿ ಚಿತ್ರಣಗೊಳ್ಳುತ್ತಲೇ ಇರುತ್ತವೆ ಎಂದು ಹೇಳುವಷ್ಟು ಅಪೂರ್ವ – ಅನನ್ಯ – ವಿಶ್ವಾತ್ಮಕ – ಅದ್ಭುತ ವ್ಯಕ್ತಿತ್ವ ಮಹಾತ್ಮನದ್ದು. ಜನರನ್ನು ಒಗ್ಗೂಡಿಸುವಲ್ಲಿ ದೃಶ್ಯಕಲೆಯ ಮಹತ್ವವನ್ನು ಗಾಂಧಿ ಮನಗಂಡಿದ್ದರೆಂಬುದು ಸುಸ್ಪಷ್ಟ. ●